**ಪಿ.ಡಬ್ಲ್ಯು-01 – ದೇವೀರಮ್ಮ**

**ಸಾಕ್ಷಿಯನ್ನು ದಿನಾಂಕಃ 02.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ. ಎಸ್.ಬಿ.ಎಸ್. ವಕೀಲರಿಂದಃ**

ಮಂಜುನಾಥರವರ ಜೊತೆ ನನ್ನ ಮದುವೆಯನ್ನು ಮನೆಯವರೇ ನೋಡಿ ಮಾಡಿಸಿರುತ್ತಾರೆ. ಮದುವೆಯಾದ ಅವರು ಮೃತರಾಗುವವರೆಗೆ ಅಂದರೆ ಸುಮಾರು 25 ವರ್ಷಗಳವರೆಗೆ ನಾವು ಜೊತೆಯಲ್ಲಿಯೇ ಇದ್ದಿದ್ದೆವು. ನಮ್ಮ ಮದುವೆಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. 1 ನೇ ಪ್ರತಿವಾದಿಯು ಮಂಜುನಾಥರವರ ವಿರುದ್ಧ ಜೀವನಾಂಶ ಕೋರಿ ದಂಡ ಪ್ರಕ್ರಿಯಾ ಸಂಹಿತೆ ಕಲಂ 125 ರಡಿಯಲ್ಲಿ ಸಿ.ಮಿಸ್. ನಂ. 352/2013 ರಂತೆ ಅರ್ಜಿ ಹಾಕಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ಮಂಜುನಾಥರವರು ಕೆ.ಎಸ್.ಆರ್.ಟಿ.ಸಿ.ಯಲ್ಲಿ ಉದ್ಯೋಗದಲ್ಲಿದ್ದಾಗ 1 ನೇ ಪ್ರತಿವಾದಿಯನ್ನು ಅವರ ಹೆಂಡತಿ ಹಾಗು ನಾಮಿನಿ ಎಂದು ತೋರಿಸಿರುತ್ತಾರೆಂದರೆ ಸಾಕ್ಷಿಯು ಅವರು ಹೆದರಿಸಿ-ಬೆದರಿಸಿ ಮಾಡಿಸಿಕೊಂಡಿರಬಹುದೆಂದು ನುಡಿಯುತ್ತಾರೆ. ಮಂಜುನಾಥರವರ ಜೊತೆ ವಿವಾಹವಾದ ನಂತರ ನಮ್ಮಿಬ್ಬರ ದಾಂಪತ್ಯದಲ್ಲಿ ಯಾವುದೇ ಮಕ್ಕಳು ಜನಿಸಿರುವುದಿಲ್ಲ. ಮಂಜುನಾಥರವರಿಗೆ ಫೈಲ್ಸ್ ಆಗಿತ್ತು ಅಲ್ಲದೇ ಮಧ್ಯಪಾನ ಮಾಡುವ ಹವ್ಯಾಸ ಹೊಂದಿದ್ದು ಅದರಿಂದ ಮೃತಪಟ್ಟಿರುತ್ತಾರೆ. ನಾನು ಅವರನ್ನು ಹಲವಾರು ಬಾರಿ ಆಸ್ಪತ್ರೆಗೆ ದಾಖಲಿಸಿರುತ್ತೇನೆ. ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಮಂಜುನಾಥರವರಿಗೆ ಕೆ.ಎಸ್.ಆರ್.ಟಿ.ಸಿ. ಯಲ್ಲಿನ ಸೇವಾ ಬೆನಿಫಿಟ್ಸ್ ಹೊರತುಪಡಿಸಿ ಅವರಿಗೆ ಬೇರೆ ಯಾವುದೇ ಆಸ್ತಿ ಇರುವುದಿಲ್ಲ. ಮಂಜುನಾಥರವರ ಅಂತ್ಯ ಸಂಸ್ಕಾರವನ್ನು ನುಗು ಬೀರ್ವಾಳ ಗ್ರಾಮದ ಅವರ ಜಮೀನಿನಲ್ಲಿ

ಮಾಡಲಾಗಿರುತ್ತದೆ. ಸದರಿ ಜಮೀನಿನ ಸ.ನಂ. ನನಗೆ ಗೊತ್ತಿರುವುದಿಲ್ಲ. ನನಗು ಹಾಗು ಮಂಜುನಾಥರವರಿಗು ಯಾವುದೇ ಸಂಬಂಧ ಇರುವುದಿಲ್ಲ ಬದಲಾಗಿ 1 ನೇ ಪ್ರತಿವಾದಿ ಅವರ ಕಾನೂನು ಬದ್ಧ ಹೆಂಡತಿಯಾಗಿದ್ದು ಸದರಿ ಮಂಜುನಾಥರವರ ಸೇವಾ ಬೆನಿಫಿಟ್ಸ್ ಗಳನ್ನು ಪಡೆದುಕೊಳ್ಳುವ ದುರುದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ದಾವೆ ಹೂಡಿರುತ್ತೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**